ಕರ್ನಾಟಕ ವಿಧಾನಸಭೆ

ಗುರುವಾರ ದಿನಾಂಕ 16ನೇ ಮಾರ್ಚ್ 2006ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು: ಕಾರ್ಯದರ್ಶಿಯವರ ವರದಿ.

1. ಕಾರ್ಯದರ್ಶಿಯವರ ವರದಿ

ವಿಷಯ:– ಘನತೆವೆತ್ತ ರಾಷ್ಟ್ರಪತಿಯವರು ದಿನಾಂಕ 20.11.2005ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಪ್ರತಿ ಸಭೆಯ ಮುಂದೆ ಮಂಡಿಸುವುದು.

ಕಾರ್ಯದರ್ಶಿಯವರು, ವಿಧಾನಸಭಾ ಸಚಿವಾಲಯ: ಸನ್ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ರಾಷ್ಟ್ರಪತಿಯವರು ದಿನಾಂಕ 20.11.2005ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಘನತೆವೆತ್ತ ರಾಷ್ಟ್ರಪತಿಯವರು ದಿನಾಂಕ 20.11.2005ರಂದು ವಿಧಾನ ಮಂಡಲದ ಉಭಯ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ಚರ್ಚೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಇಬ್ಬರು ಸೆಕ್ರೆಟರಿಗಳು ಅಧ್ಯಕ್ಷರ ಪೀಠದ ಮುಂಭಾಗ ಕುಳಿತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, Secretaryಗಳು ಇಬ್ಬರಿದ್ದಾರೆ, ಯಾರ್ಯಾರ ಕರ್ತವ್ಯಗಳು ಏನು? ಯಾರು ವರದಿಯನ್ನಿಡಬೇಕು? ಬೇರೆ ಕೆಲಸವನ್ನು ಯಾರು ಮಾಡಬೇಕು? ಇದನ್ನೆಲ್ಲಾ ತಿಳಿದುಕೊಳ್ಳುವ ಹಕ್ಕು ನಮ್ಮ ಸಭೆಗಿದೆ. ಇವತ್ತು Secretary place ನಲ್ಲಿ ಇಬ್ಬರು ಕುಳಿತಿದ್ದಾರೆ. ಯಾರ್ಯಾರಿಗೆ ಏನೇನನ್ನು ಅಸೈನ್ ಮಾಡಿದ್ದೀರಿ? ಇಬ್ಬರು ಕುಳಿತುಕೊಳ್ಳಬಹುದೆ?